ದಿನಾಂಕಃ **03.12.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲುಃ **1** ನೇ ಪ್ರತಿವಾದಿ ಪರ ಶ್ರೀ ಎಮ್ ವಿ ಆರ್ ವಕೀಲರಿಂದಃ

ನಾನು ತಮಿಳು ಮೀಡಿಯಂ ನಲ್ಲಿ 5 ನೇ ಕ್ಲಾಸವರೆಗೂ ಓದಿದ್ದೇನೆ. ಪ್ರತಿವಾದಿ 2 ಪ್ರೀಯಾ ರವರ ಯಜಮಾನರರಾದ ಬಾಲು ರವರ ಪಾಲಿಗೆ ಎಷ್ಟು ಮನೆಗಳು ಹೋಗಿವೆ ಎಂದರೆ 9 ಮನೆಗಳು ಹೋಗಿವೆ. ಪ್ರತಿವಾದಿ 1 ಶಿವಲಿಂಗಮ್ಮ ರವರ ಭಾಗಕ್ಕೆ ಏನೇನೂ ಹೋಗಿದೆ ಎಂದರೆ ಅಂಗಡಿ, 3 ಮನೆ, ಒಂದು ಫ್ಯಾಕ್ಟರಿ ಇದೆ. ನೀವು ಯಾವ ಫ್ಲೋರನಲ್ಲಿ ವಾಸವಾಗಿದ್ದೀರಿ ಎಂದರೆ 2 ನೇ ಪ್ರತಿವಾದಿಯ ಯಜಮಾನರರಾದ ಬಾಲುರವರ ಬಂದ ಭಾಗದ ಕಟ್ಟಡದ ಗ್ರೌಂಡ ಫ್ಲೋರನ ಒಂದು ಮನೆಯಲ್ಲಿ ವಾಸವಾಗಿದ್ದೇನೆ. ವಾದಿ 5 ಕುಮಾರಿ ಅಶ್ವಿನಿ ನಿಮ್ಮ ಹತ್ತಿರ ನಿಮ್ಮ ಜೊತೆ ಯಲ್ಲಿ ಇದ್ದಾರೆ ಎಂದರೆ ಸರಿ. ನಿಮಗೆ ಮಕ್ಕಳಿಲ್ಲದ ಕಾರಣ ವಾದಿ 5 ಕುಮಾರಿ ಅಶ್ವಿನಿ ರವರನ್ನು ಸಾಕು ಮಗಳಾಗಿ ತೊಗೊಂಡಿದ್ದೀರಿ ಎಂದರೆ ಸರಿ. ವಾದಿ 2 ರಿಂದ 4 ಪ್ರಸ್ತುತ ಈಗ ಎಲ್ಲಿ ವಾಸವಾಗಿದ್ದಾರೆ ಎಂದರೆ ಹಿಂದೆ 2 ನೇ ಪ್ರತಿವಾದಿಯ ಯಜಮಾನರರಾದ ಬಾಲುರವರ ಬಂದ ಭಾಗದ ಕಟ್ಟಡದ 2 ನೇ ಫ್ಲೋರನಲ್ಲಿ ವಾಸವಾಗಿದ್ದರು, ಈಗ ಇಲ್ಲ.

ವಿಭಾಗ ಪತ್ರದಲ್ಲಿ ಶೆಡ್ಯೂಲ್ 3 ಮತ್ತು 4 ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿ. ಅದರಲ್ಲಿ ಶೆಡ್ಯೂಲ್ 3 ನಿಮ್ಮ ಭಾಗಕ್ಕೆ ಬಂದಿದೆ ಎಂದರೆ ಸರಿಯಲ್ಲ. ಅದೇ ರೀತಿ ಶೆಡ್ಯೂಲ್ 4 ಉಳಿಕೆ 3 ಲಕ್ಷ ಕೃಷ್ಣವೇಣಿರವರು ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಅವರು ತೆಗೆದುಕೊಂಡಿಲ್ಲವೆ ಅಥವಾ ಆ ವಿಚಾರ ನಿಮಗೆ ಗೊತ್ತಿಲ್ಲವೇ

ಎಂದರೆ ನನಗೂ ಮತ್ತು ನನ್ನ ತಂಗಿಗೂ ಏನೂ ಕೊಟ್ಟಿಲ್ಲ. ವಿಭಾಗ ಪತ್ರದ ಶೆಡ್ಯೂಲ್ 4 ರ 3 ಲಕ್ಷ ಹಣವನ್ನು ಕೃಷ್ಣವೇಣಿರವರು ತೆಗೆದುಕೊಂಡಿದ್ದಾರೆ ಆ ವಿಚಾರ ಅವರ ಮಕ್ಕಳಿಗೂ ಸಹ ಗೊತ್ತಿದೆ ಎಂದರೆ ಸರಿಯಲ್ಲ. ವಾದಿ 2 ರಿಂದ 4 ರವರನ್ನು ಸಾಕ್ಷಿದಾರರನ್ನಾಗಿ ವಿಚಾರಣೀ ಮಾಡಲು ನಿಮಗೆ ತೊಂದರೆ ಇಲ್ಲ ಎಂದರೆ ತೊಂದರೆ ಇಲ್ಲ. ಮುಂದಿನ ದಿನಾಂಕದಂದು ವಾದಿ 2 ರಿಂದ 4 ರವರನ್ನು ಕರೆಸಬಹುದೆ ಎಂದರೆ 2 ನೇವಾದಿಯವರಿಗೆ ಕೈಕಾಲು ಬಿದ್ದು ಹೋಗಿದೆ ಹಾಗಾಗಿ ಅವರನ್ನು ಕರೆಸಲು ಆಗುವುದಿಲ್ಲ. 3 ಮತ್ತು 4 ರವರನ್ನು ಕೇಳುತ್ತೇನೆ. 2 ನೇವಾದಿ ಯವರಿಗೆ ಕೈಕಾಲು ಬಿದ್ದು ಹೋಗಿರುವ ಬಗ್ಗೆ ವೈದ್ಯರ ಪ್ರಮಾಣ ಪತ್ರವನ್ನು ಕೋಡಬಹುದೇ ಎಂದರೆ ಹಾಜರು ಪಡಿಸುತ್ತೇನೆ. ನಮ್ಮ ಯಜಮಾನರು ಅ ವಿದ್ಯಾವಂತರು. ಪ್ರತಿವಾದಿ 2 ರವರ ಯಜಮಾನರ ಹೆಸರಿಗೆ ಖಾತೆ ಆಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮಗೆ 4 ಭಾಗ ಬೇಕು ಎಂದು ಗಲಾಟೆ ಮಾಡಿದ್ದೆ ಅವರು ನನಗೆ ಗೊತ್ತಿಲ್ಲದ ಹಾಗೆ ಅಣ್ಣ ತಮ್ಮಂದಿರು ಇಬ್ಬರೂ ನನಗೆ ಮತ್ತು ತಂಗಿಗೆ ಗೊತ್ತಿಲ್ಲದೆ ಹಾಗೆ ಅವರ ಹೆಸರಿಗೆ ಬರೆಸಿಕೊಂಡಿದ್ದಾರೆ. ಬಾಲುರವರು ಖಾತೆ ಮಾಡಿಸಿಕೊಳ್ಳಲು ಅರ್ಜಿ ನೀಡಿದ್ದಾಗ ಯಾರಾದರೂ ತಕರಾರು ಮಾಡಿದ್ದರಾ ಎಂದರೆ ನಾನು ತಕರಾರು ಮಾಡಿದ್ದೆ. ಆ ಸಂಬಂಧ ಯಾವುದಾದರೂ ದಾಖಲೆ ಇದೆ ಎಂದರೆ ಇಲ್ಲ. ಸಾಕ್ಷಿ ಮುಂದುವರೆದು ಬಿ ಬಿ ಎಂ ಪಿ ಇಲಾಖೆಗೆ ಹೋಗಿ ತಕರಾರು ಮಾಡಿದ್ದೆ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ.**

**(ನಿಶಾ ರಾಣಿ ಎ. ಸಿ)**
**III ನೇ ಎ.ಸಿ.ಸಿ & ಎಸ್.ಜೆ,**
**ಬೆಂಗಳೂರು.**